T.C: 041

017/DD/21

| Register Number | | | | | | | | | |
|---|---|---|---|---|---|---|---|---|---|

## DEPARTMENTAL EXAMINATIONS

## TRANSLATION TEST – SECOND PAPER – TRANSLATION OF NEWS PAPER REPORT IN KANNADA TO ENGLISH

(Without Books)

Maximum Time : 2.30 hours

Maximum Marks : 100

Answer ALL questions.

1. Translate into English : (1 × 80 = 80)

ಅರಣ್ಯನಾಶದ ದುಷ್ಪರಿಣಾಮಗಳು.

ಕಾಡಿನಲ್ಲಿರುವ ಮರಗಿಡಗಳನ್ನು ಕಡಿದು ಹಾಕುವುದನ್ನು ಅರಣ್ಯನಾಶ ಎನ್ನುತ್ತೇವೆ. ಮರಗಳನ್ನು ಕತ್ತರಿಸಿ ಕೆಳಗೆ ಬೀಳಿಸುವ ಮೂಲಕ ಅರಣ್ಯವನ್ನು ನಾಶಮಾಡಲಾಗುತ್ತದೆ. ಶುದ್ಧಗೊಳಿಸುವುದಕ್ಕಾಗಿ ವಿಸ್ತಾರವಾದ ಪ್ರದೇಶದಲ್ಲಿ ಆವರಿಸಿರುವ ಮರಗಳನ್ನು ಬೃಹತ್ ಪ್ರಮಾಣದಲ್ಲಿ ಕತ್ತರಿಸಿದಾಗ ಹಲವು ಮರಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಈ ಮಾನವ–ನಿರ್ಮಿತ ಚಟುವಟಿಕೆಯು ಪರಿಸರ ಮತ್ತು ವಾತಾವರಣವನ್ನು ಅಳಿಸಿಹಾಕುವಂತೆ ಪರಿಣಾಮವನ್ನು ಬೀರುತ್ತದೆ.

ಅರಣ್ಯನಾಶವು ಒಂದು ಪ್ರದೇಶದ ಸಸ್ಯವರ್ಗದ ಮೇಲೆ ಹಲವು ಪರಿಸರ ವಿನಾಶಕಾರಿ ಪರಿಣಾಮ ಬೀರುವುದಲ್ಲದೆ, ಆಹಾರ ಸರಪಳಿ ಮತ್ತು ಜಲಚಕ್ರಕ್ಕೆ ತೊಂದರೆಯನ್ನು ಉಂಟುಮಾಡುತ್ತದೆ. ಅರಣ್ಯನಾಶದಿಂದ ಸೃಷ್ಟಿಯಾದ ಕ್ಷೋಭೆಯು, ಪರಿಸರ ವ್ಯವಸ್ಥೆಯ ಮೇಲೆ ಅಲ್ಪಾವಧಿ ಮತ್ತು ದೀರ್ಘಾವಧಿ ಪರಿಣಾಮವನ್ನು ಉಂಟುಮಾಡುತ್ತದೆ.

ಅರಣ್ಯನಾಶವು ಅರಣ್ಯ ಮತ್ತು ಮರಗಳಲ್ಲಿ ವಾಸಿಸಿ, ತನ್ನ ವಾಸಸ್ಥಳವನ್ನು ಕಳೆದುಕೊಳ್ಳುವ ಹಲವು ವನ್ಯಮೃಗ ತಳಿಗಳ ಮೇಲೆ ಘೋರ ಪರಿಣಾಮವನ್ನು ಬೀರುತ್ತದೆ. ಇದಲ್ಲದೆ ಆ ಪ್ರದೇಶದಲ್ಲಿ ಬೀಳುವ ಮಳೆಯ ಪ್ರಮಾಣದಲ್ಲೂ ಕ್ಷೋಭೆಯನ್ನು ಉಂಟುಮಾಡುತ್ತದೆ. ತನ್ನ ಆಹಾರಕ್ಕಾಗಿ ಮರಗಿಡಗಳನ್ನು ಅವಲಂಬಿಸಿರುವ ಸಸ್ಯಾಹಾರಿ ವನ್ಯಮೃಗಗಳು ತಮ್ಮ ಆಹಾರ ಮೂಲವನ್ನೇ ಕಳೆದುಕೊಳ್ಳುತ್ತವೆ. ಅರಣ್ಯವನ್ನು ಅವಲಂಬಿಸಿ ಬದುಕುವ ಜನರು ಸಹ ತಮ್ಮ ಜೀವನೋಪಾಯ ಮತ್ತು ಆಹಾರ ಮೂಲವನ್ನು ಕಳೆದುಕೊಳ್ಳುತ್ತಾರೆ. ಜಾಗತಿಕ ತಾಪಾಮಾನ ಮತ್ತು ಹವಮಾನ ಬದಲಾವಣೆಯು ಸಹ ಅರಣ್ಯನಾಶದ ಪರಿಣಾಮವೇ ಆಗಿದೆ.

[Turn over

2. ಈ ಕೆಳಕಂಡ ಗಾದೆಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿರಿ. (10 × 2 = 20)

(a) ಕಾಯಕವೇ ಕೈಲಾಸ.

(b) ಧೈರ್ಯಂ ಸರ್ವತ್ರ ಸಾಧನಂ.

(c) ನಿಧಾನವೇ ಪ್ರಧಾನ.

(d) ಹೊಳೆಯುವುದೆಲ್ಲ ಚಿನ್ನವಲ್ಲ.

(e) ಮುಖವೇ ಮನಸ್ಸಿನ ಕನ್ನಡಿ.

(f) ಬೊಗಳುವ ನಾಯಿ ಕಚ್ಚುವುದಿಲ್ಲ.

(g) ಹನಿ ಹನಿಗೂಡಿದರೆ ಹಳ್ಳ.

(h) ಸಮಯಕ್ಕಾದವನೇ ನಂಟ.

(i) ಮಾಡಿದುಣ್ಣೋ ಮಹಾರಾಯ.

(j) ಕೈ ಕೆಸರಾದರೆ ಬಾಯಿ ಮೊಸರು.